

# ಏಷ್ಯಾದ ಧಣಿ

■ ಪ್ರವೀಣ ಕುಲಕರ್ಣಿ

ಮುಕೇಶ್ ಅಂಬಾನಿ – ಭಾರತದಲ್ಲಿ ಸದಾ ಸುದ್ದಿಯಲ್ಲಿರುವ ಹೆಸರು. ಜಗತ್ತಿನ ಕಣ್ಣು ಕುಕ್ಕಿಸುವ ಭಾರತದ ದೈತ್ಯ ಕಂಪನಿ ಎನಿಸಿದ ರಿಲಯನ್ಸ್ ಇಂಡಸ್ಟ್ರೀಸ್‌ನ ಮಾಲೀಕರಾದ ಮುಕೇಶ್ ಈಗ ಏಷ್ಯಾದಲ್ಲೇ ಅತ್ಯಂತ ಶ್ರೀಮಂತ ವ್ಯಕ್ತಿ. ಇದುವರೆಗೆ ಆ ಸ್ಥಾನದಲ್ಲಿ ವಿರಾಜಮಾನರಾಗಿದ್ದ ಚೀನಾದ ಉದ್ಯಮಿ ಜಾಕ್ ಮಾ, ಮುಕೇಶ್ ಮುಂದೆ ಮಂಕಾಗಿದ್ದಾರೆ. ಫೋರ್ಬ್ಸ್ ಮ್ಯಾಗಜಿನ್‌ನ ಲೆಕ್ಕಾಚಾರದ ಪ್ರಕಾರ ರಿಲಯನ್ಸ್ ಇಂಡಸ್ಟ್ರೀಸ್‌ನ ಧಣಿಯ ಒಟ್ಟು ಆಸ್ತಿ ಮೌಲ್ಯ 84.5 ಶತಕೋಟಿ ಅಮೆರಿಕನ್ ಡಾಲರ್ (ಸರಿಸುಮಾರು 62.80 ಲಕ್ಷ ಕೋಟಿ ರೂಪಾಯಿ)!

ಭಾರತದ ಆಡಳಿತದ ಚುಕ್ಕಾಣಿ ಹಿಡಿದವರಿಗೆಲ್ಲ ಮುಕೇಶ್ ಪರಮಾಪ್ತರು ಎನ್ನುವ ಮಾತು ಮೇಲಿಂದ ಮೇಲೆ ಕೇಳಿಬರುತ್ತಲೇ ಇರುತ್ತದೆ. ಸರ್ಕಾರದ ನೀತಿ ನಿರೂಪಣೆಯಲ್ಲೂ ಅವರ ಛಾಪು ಇದೆ ಎಂದೂ ಹೇಳಲಾಗುತ್ತದೆ. ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಶಾ ಅವರೊಂದಿಗೆ ಈ ಉದ್ಯಮಿ ಗಟ್ಟಿಯಾದ ನಂಟು ಹೊಂದಿರುವುದಂತೂ ಸತ್ಯ. ಕಾಕತಾಳೀಯ ಎನ್ನುವಂತೆ ಎನ್‌ಡಿಎ ಸರ್ಕಾರದ ಅವಧಿಯಲ್ಲೇ ಮುಕೇಶ್ ಅವರ ಆಸ್ತಿಯ ಮೌಲ್ಯ ಗಗನಮುಖಿಯಾಗಿ ಏರುತ್ತಿದೆ. ಅವರ ಉದ್ಯಮಗಳು ದೈತ್ಯವಾಗಿ ಬೆಳೆಯುತ್ತಿವೆ.

ಮುಕೇಶ್ ಅವರ ತಂದೆ ಧೀರೂಭಾಯಿ ಅಂಬಾನಿಯವರು ಬದುಕು ಅರಿಸಿಕೊಂಡು ಯೆಮನ್‌ಗೆ ಹೋದವರು. ಮುಕೇಶ್ ಜನಿಸಿದ್ದು ಕೂಡ ಅಲ್ಲಿಯೇ. ಮುಂಬೈಗೆ ವಾಪಸ್ ಬಂದ ಧೀರೂಭಾಯಿ, ಸಾಂಬಾರು ಪದಾರ್ಥ ಹಾಗೂ ಬಟ್ಟೆ ರಫ್ತುಮಾಡುವ ಪುಟ್ಟ ಉದ್ಯಮವನ್ನು ಆರಂಭಿಸಿದವರು. ಮುಂಬೈನ ಭುಲೇಶ್ವರದ ಪುಟ್ಟ ಅಪಾರ್ಟ್‌ಮೆಂಟ್ ಒಂದರಲ್ಲಿ ಅಂಬಾನಿ ಕುಟುಂಬ ನೆಲೆ ಕಂಡುಕೊಂಡಿತ್ತು. ಆಗ ಸಮೂಹ ಸಾರಿಗೆಯಲ್ಲೇ ಈ ಕುಟುಂಬದ ಸದಸ್ಯರೂ ಪ್ರಯಾಣಿಸಬೇಕಿತ್ತು. ಆದರೆ, ಧೀರೂಭಾಯಿಯವರು ಯಶಸ್ವಿ ಉದ್ಯಮಿಯಾಗಿ ಬೆಳೆದಂತೆ 14 ಅಂತಸ್ತುಗಳ ಅಪಾರ್ಟ್‌ಮೆಂಟ್ ಖರೀದಿಸಿದರು. ಓಡಾಡಲು ಕಾರುಗಳೂ ಬಂದವು.

ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಮುಕೇಶ್, ತಂದೆಯೊಂದಿಗೆ ಉದ್ಯಮವನ್ನು ಬೆಳೆಸುತ್ತಲೇ ಹೋದರು. ರಿಲಯನ್ಸ್ ಸಾಮ್ರಾಜ್ಯ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಾ ಸಾಗಿದ್ದಾಗ 2002ರಲ್ಲಿ ಧೀರೂಭಾಯಿ ಅಸುನೀಗಿದರು. ಕಂಪನಿಯನ್ನು ಎರಡು ಭಾಗ ಮಾಡಿದ ಅವರ ಪತ್ನಿ ಮುಕೇಶ್ ಅವರಿಗೊಂದು ಹಾಗೂ ಅವರ ಸಹೋದರ ಅನಿಲ್ ಅವರಿಗೊಂದು ಹಂಚಿಕೊಟ್ಟರು. ಪೆಟ್ರೋಲಿಯಂ ಮತ್ತು ದೂರಸಂಪರ್ಕ ಸೇವೆಯಲ್ಲಿ ದೊಡ್ಡಅಲೆಯನ್ನೇ ಎಬ್ಬಿಸಿದ ಮುಕೇಶ್ ಅವರ ಸಂಸ್ಥೆ, ಈಗ ದೈತ್ಯಾಕಾರವಾಗಿ ಬೆಳೆದುನಿಂತಿದೆ. ರಿಲಯನ್ಸ್ ಎಸಗಿದ ಅಕ್ರಮಗಳ ಕುರಿತು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಧ್ವನಿ ಎತ್ತಿದ್ದೂ ಉಂಟು.

ನೀತಾ ಅವರನ್ನು ವಿವಾಹವಾಗಿರುವ ಮುಕೇಶ್ ಅವರಿಗೆ ಮೂವರು ಮಕ್ಕಳು (ಇಬ್ಬರು ಪುತ್ರರು, ಒಬ್ಬ ಪುತ್ರಿ). ಇವರು ಐಪಿಎಲ್‌ನ ಮುಂಬೈ ಇಂಡಿಯನ್ಸ್ ತಂಡದ ಒಡೆಯರೂ ಹೌದು. ಜಗತ್ತಿನಲ್ಲೇ ಅತ್ಯಂತ ದುಬಾರಿಯಾದ 27 ಅಂತಸ್ತುಗಳ 'ಆ್ಯಂಟಿಲಿಯಾ' ಮುಕೇಶ್ ಅವರ ಮನೆ. ಆರು ಜನ ವಾಸವಿರುವ ಈ ಮನೆಯ ನಿರ್ವಹಣೆಗೆ ಇರುವುದು 600 ಸಿಬ್ಬಂದಿ. 160 ಕಾರುಗಳ 'ಮನೆ'ಗಳು, ಮೂರು ಹೆಲಿಪ್ಯಾಡ್‌ಗಳು, ಮೂವಿ ಥಿಯೇಟರ್, ಸ್ವಿಮ್ಮಿಂಗ್ ಪೂಲ್, ಫಿಟ್‌ನೆಸ್ ಸೆಂಟರ್ ಈ ಮನೆಯಲ್ಲಿವೆ.

ಒಂದೂವರೆ ದಶಕದ ಹಿಂದಿನ ಮಾತು. ಆಗ ತಮ್ಮ 44ನೇ ಜನ್ಮದಿನ ಆಚರಿಸಿಕೊಂಡ ಪತ್ನಿಗೆ ಮುಕೇಶ್ ಕೊಟ್ಟ ಕಾಣಿಕೆ ಏನು ಗೊತ್ತೆ? ಒಂದು ವಿಮಾನ! ಲಿವಿಂಗ್ ರೂಮ್, ಬೆಡ್ ರೂಮ್, ಸ್ಕೈ ಬಾರ್, ಸೆಟಲೈಟ್ ಟೆಲಿವಿಷನ್ ಏನೆಲ್ಲವನ್ನೂ ಹೊಂದಿದ್ದ ಈ ವಿಮಾನದ ಬೆಲೆ ಆಗಿನ ದಿನಗಳಲ್ಲೇ ಆರು ಕೋಟಿ ಡಾಲರ್.

ಏಷ್ಯಾದ ಅತಿದೊಡ್ಡ ಶ್ರೀಮಂತ ಎಂಬ ಪಟ್ಟ ಒಲಿದಿದೆ. ಏನೆಲ್ಲ ವೈಭೋಗವಿದೆ, ಮನಬಂದಂತೆ ಖರ್ಚು ಮಾಡಲು ದುಡ್ಡೂ ಇದೆ. ಒಂದೇ ಒಂದು ಇಶಾರೆಗೆ ಬಾಲಿವುಡ್ ಬಳಕುತ್ತದೆ. ಅಧಿಕಾರಸ್ಥರ ಸ್ನೇಹವೂ ಉಂಟು. ಎಲ್ಲವೂ ನಿಜ. ಆದರೆ, ಬಾಂಬ್ ಸ್ಫೋಟದ ಬೆದರಿಕೆ ಕರೆಗಳು ಎಲ್ಲಿ ನಿಜವಾಗಿ ಅಪಾಯ ತಂದೊಡ್ಡುವವೋ ಎಂಬ ಆತಂಕ ಮಾತ್ರ ಆ್ಯಂಟಿಲಿಯಾ ನಿವಾಸಿಗಳ ನಿದ್ದೆಗೆಡಿಸಿಬಿಟ್ಟಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65